**ತುಮಕೂರು ವಿಶ್ವವಿದ್ಯಾನಿಲಯ**

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು - 572 103

**ಸಂಖ್ಯೆ: ತುವಿ: ಶೈವಿ:ಪಿ.ಜಿ:2026–27:1811** **ದಿನಾಂಕ:14.08.2026**

# ಅಧಿಸೂಚನೆ

## ಸ್ನಾತಕೋತ್ತರ ಕೋರ್ಸ್‌ಗಳ ಉಳಿಕೆ ಸೀಟುಗಳ ಪ್ರವೇಶಾತಿ ಕುರಿತು

**ವಿಷಯ:** 2026–27ನೇ ಶೈಕ್ಷಣಿಕ ಸಾಲಿಗೆ ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಕೋರ್ಸ್‌ಗಳ ಉಳಿಕೆ ಸೀಟುಗಳಿಗೆ ಪ್ರವೇಶಾತಿಗಾಗಿ ಅರ್ಜಿಯನ್ನು ಸಲ್ಲಿಸುವ ಕುರಿತು.

**ಉಲ್ಲೇಖ:** 1. ಸಂಖ್ಯೆ:ತುವಿ:ಶೈವಿ:PG-ADM:2026–27/ 1405 ದಿನಾಂಕ:22.07.2026

2. ಸಂಖ್ಯೆ:ತುವಿ:ಶೈವಿ:PG-ADM:2026–27/ 1618 ದಿನಾಂಕ:03.08.2026
3. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ:14.08.2026 (ಕಂಡಿಕೆ–63)

*****

ತುಮಕೂರು ವಿಶ್ವವಿದ್ಯಾನಿಲಯದ 2026–27ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕೋತ್ತರ ಕೋರ್ಸ್‌ಗಳಿಗೆ ಮೊದಲ ಹಂತದ ಪ್ರವೇಶ ಪ್ರಕ್ರಿಯೆ ಮುಕ್ತಾಯಗೊಂಡಿದ್ದು, ಕೆಲವು ವಿಭಾಗ/ಕಾಲೇಜುಗಳಲ್ಲಿ ಸೀಟುಗಳು ಉಳಿದಿರುವ ಹಿನ್ನೆಲೆಯಲ್ಲಿ ಅರ್ಹ ಆಸಕ್ತ ವಿದ್ಯಾರ್ಥಿಗಳು ದಿನಾಂಕ:**20.08.2026** ರ ವರೆಗೆ ಅಗತ್ಯ ದಾಖಲೆಗಳೊಂದಿಗೆ ಸಂಬಂಧಪಟ್ಟ ವಿಭಾಗಗಳನ್ನು ಸಂಪರ್ಕಿಸಿ ಅರ್ಜಿಯನ್ನು (**UUCMS OR MANUAL**) ಸಲ್ಲಿಸಿ ಪ್ರವೇಶಾತಿ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

**ಹೆಚ್ಚಿನ ಮಾಹಿತಿಗಾಗಿ: ವಿಭಾಗಗಳ ಮುಖ್ಯಸ್ಥರು/ಸಂಯೋಜಕರನ್ನು ಸಂಪರ್ಕಿಸುವುದು.**

**ಸೂಚನೆ:1. ಉಲ್ಲೇಖ(01)ರ ಅಧಿಸೂಚನೆಯಲ್ಲಿನ ನಿಬಂಧನೆಗಳು ಹಾಗೂ ಸೂಚನೆಗಳಲ್ಲಿ ಯಾವುದೇ ಬದಲಾವಣೆಯಿರುವುದಿಲ್ಲ.**

2. **ವಿದ್ಯಾರ್ಥಿಗಳು ಪ್ರವೇಶಾತಿ ಅರ್ಜಿ ಶುಲ್ಕವನ್ನು SB Collect ಮುಖಾಂತರ ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರ ಖಾತೆಗೆ ಪಾವತಿಸುವುದು ಹಾಗೂ ಚಲನ್‌ನನ್ನು UUCMS ಗೆ ಅಪ್ಲೋಡ್ ಮಾಡುವುದು. UUCMS ನಲ್ಲಿ pay online ಮೂಲಕ ಅರ್ಜಿ ಶುಲ್ಕ ಪಾವತಿಸುವಂತಿಲ್ಲ.**
3. **ಈಗಾಗಲೇ ಪ್ರಥಮ ಸುತ್ತಿನ ಪ್ರವೇಶಾತಿ ಪ್ರಕ್ರಿಯೆಯಲ್ಲಿ ಅರ್ಜಿ ಸಲ್ಲಿಸಿ ಪ್ರಥಮ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಎರಡನೇ ಸುತ್ತಿಗೆ ಪ್ರತ್ಯೇಕವಾಗಿ ಅರ್ಜಿಯನ್ನು ಸಲ್ಲಿಸುವ ಅವಶ್ಯಕತೆಯಿರುವುದಿಲ್ಲ. ಹಿಂದಿನ ಅರ್ಜಿಯನ್ನು ಎರಡನೇ ಸುತ್ತಿನ ಕೌನ್ಸಿಲಿಂಗ್‌ಗೆ ಪರಿಗಣಿಸಲಾಗುವುದು.**
4. **Manual ನಲ್ಲಿ ಅರ್ಜಿ ಸಲ್ಲಿಸಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಅರ್ಜಿಗಳನ್ನು ಪ್ರವೇಶ ಪ್ರಕ್ರಿಯೆ ಮುಗಿದ ನಂತರ UUCMS ಗೆ ಅಪ್ಲೋಡ್ ಮಾಡುವುದು.**

**ಆದೇಶದ ಮೇರೆಗೆ**

ಉಪಕುಲಸಚಿವರು

**ಉಪಕುಲಸಚಿವರು**
**ಶೈಕ್ಷಣಿಕ ವಿಭಾಗ**
**ತುಮಕೂರು ವಿಶ್ವವಿದ್ಯಾನಿಲಯ**
**ತುಮಕೂರು**

**ಗೆ,**

1. ಅಧ್ಯಕ್ಷರು, ಎಲ್ಲಾ ಸ್ನಾತಕೋತ್ತರ ಪ್ರವೇಶಾತಿ ಸಮಿತಿ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಎಲ್ಲಾ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಮುಖ್ಯಸ್ಥರು / ಸಂಯೋಜನಾಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು: **ಸೂಚನೆ (01) ರಿಂದ (04) ರ ವರೆಗಿನ ಅಂಶಗಳನ್ನು ಪರಿಗಣಿಸಿ ಅದರಂತೆ ಕ್ರಮವಹಿಸುವುದು.**
3. ಪ್ರಾಂಶುಪಾಲರುಗಳು, ವಿಶ್ವವಿದ್ಯಾನಿಲಯ ಘಟಕ ಮತ್ತು ಸಂಯೋಜಿತ ಸ್ನಾತಕೋತ್ತರ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

**ಪ್ರತಿಗಳು:**

1. ಕುಲಸಚಿವರು (ಪರೀಕ್ಷಾಂಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಡೀನರು ಕಲಾ/ ವಾಣಿಜ್ಯ ಮತ್ತು ನಿರ್ವಹಣೆ/ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯಗಳು, ತು.ವಿ.ತು
5. ಉಪಕುಲಸಚಿವರು, ಪರೀಕ್ಷಾಂಗ/ಸಾಮಾನ್ಯ & ಅಭಿವೃದ್ಧಿ/ ಸಿಬ್ಬಂದಿ/ ಕಾನೂನು ಕೋಶ ವಿಭಾಗಗಳು, ತು.ವಿತು
6. ಸಿಸ್ಟಮ್ ಅನಾಲಿಸ್ಟ್, ತು.ವಿ.ತು – ವಿಶ್ವವಿದ್ಯಾನಿಲಯದ ಅಂತರ್ಜಾಲದಲ್ಲಿ ಪ್ರಕಟಿಸುವುದು.
7. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
8. ಕಚೇರಿ ಪ್ರತಿ.